ವರದಿಯನ್ನು ಮಾಡಿಸಿದ್ದೇವೆ. ಸುಮಾರು 3 ಕೋಟಿ 20 ಲಕ್ಷ ವೆಚ್ಚದ ಈ ಕೆಲಸವನ್ನು ನಾವು ತೆಗೆದುಕೊಳ್ಳಬೇಕಾಗಿದೆ. ನಮ್ಮ ಇಲಾಖೆಯ ಹಣಕಾಸು ಸ್ಥಿತಿಯ ಮೇಲೆ ಇದು ಅವಲಂಬಿಸಿರುತ್ತದೆ. ಇದರ ಅವಶ್ಯಕತೆ ಇದ್ದರೆ ಮುಂದಿನ ವರ್ಷ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.

ಶ್ರೀ ರಾಜಶೇಖರ್ ವಿ.ಶೀಲವಂತ: ಬಹಳ ಅವಶ್ಯಕತೆಯ ಸಲುವಾಗಿಯೇ ಇದನ್ನು ಕೇಳುತ್ತಿರತಕ್ಕದ್ದು. ದಯವಿಟ್ಟು ಸಚಿವರು ಮುಂದಿನ ವರ್ಷವಾದರೂ ಇದನ್ನು ಮಾಡಿಕೊಡಬೇಕು.

ವಿಷಯ: ಅರಕಲಗೂಡಿನ ಕೆರೆ ಏರಿ ಕುರಿತು.

531 (3438)

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಕಲಗೂಡು ಪಟ್ಟಣದ ಕೋಟೆ ಮತ್ತು ಪೇಟೆ ಮಧ್ಯದಲ್ಲಿರುವ ಕೆರೆಯಿಂದ, ಪಟ್ಟಣದ ನೈರ್ಮಲ್ಯಕ್ಕೆ ಧಕ್ಕೆಯಾಗುತ್ತಿದ್ದುದರಿಂದ, ಹತ್ತು ಎಕರೆ ಕೆರೆ ಅಂಗಳಕ್ಕೆ ಮೇಲು ಭಾಗಕ್ಕೆ ಏರಿ ನಿರ್ಮಿಸಿ, ಉಳಿದ ಕೆರೆ ಅಂಗಳವನ್ನು ತೆರವು ಮಾಡಲು ಸರ್ಕಾರ ಆದೇಶಿಸಿರುವುದು ಯಾವಾಗ?

ಆ) ಇದುವರೆವಿಗೂ ಸದರಿ ಆದೇಶದ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು?

ಇ) ಯಾವಾಗ ಈ ಸರ್ಕಾರಿ ಆದೇಶದಂತೆ ಹತ್ತು ಎಕರೆಗೆ ಏರಿ ನಿರ್ಮಿಸಲು ಮತ್ತು ಉಳಿದ ಭಾಗವನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) ಅರಕಲಗೂಡು ಪಟ್ಟಣದ ಕೋಟೆ ಮತ್ತು ಪೇಟೆ ಮಧ್ಯದಲ್ಲಿರುವ ಕೆರೆಯನ್ನು ತೆರವು ಮಾಡಲು ಸರ್ಕಾರದ ಆದೇಶ ಸಂಖ್ಯೆ: ನೀಇ 87 ಸನೀಶಿ 94, ಬೆಂಗಳೂರು, ದಿನಾಂಕ:27-9-94ರಲ್ಲಿ ಆದೇಶ ಆಗಿರುತ್ತದೆ.

ಆ ಮತ್ತು ಇ) ಈ ಕಾಮಗಾರಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿದ್ದು ಅನುದಾನದ ಕೊರತೆಯಿಂದಾಗಿ ಕಾಮಗಾರಿಯನ್ನು ಕೈಗೊಂಡಿಲ್ಲ. ಅನುದಾನ ಒದಗಿಸಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುವಂತೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾಪಂಚಾಯತ್ ಹಾಸನ, ಇವರನ್ನು ಕೋರಲಾಗಿದೆ.

ಶ್ರೀ ಎ.ಟಿ.ರಾಮಸ್ವಾಮಿ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಅರಕಲಗೂಡು ಪಟ್ಟಣ ಮತ್ತು ಕೋಟೆ ಮಧ್ಯದಲ್ಲಿರುವ ಕೆರೆಯನ್ನು ತೆರವು ಮಾಡಬೇಕು. ಇಲ್ಲದಿದ್ದರೆ ಆ ಕೆರೆಗೆ ಊರಿನ ಕೊಳಚೆ ನೀರು ಬಂದು ಸೇರುತ್ತಿದೆ, ಹೂಳು ತುಂಬಿಕೊಂಡು ಜೊಂಡು ಬೆಳೆದು ಸೊಳ್ಳೆಗಳ ವಾಸಸ್ಥಾನವಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ಬಹಳ ಕೆಟ್ಟ ಪರಿಣಾಮ ಬೀರುತ್ತಿದೆ. ಅದು ಸುಮಾರು 34 ಎಕರೆ ಇದೆ. ಮೇಲ್ಭಾಗದ 10 ಎಕರೆ ಉಳಿಸಿಕೊಂಡು ಉಳಿದುದನ್ನು ಒಣಗಿಸಬೇಕೆಂದು ಆದೇಶವಾಗಿ ಮೂರು ವರ್ಷಗಳಾಗಿದೆ. ಇದುವರೆಗೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಜನರ ಆರೋಗ್ಯ ಕೆಟ್ಟಮೇಲೆನಾದರೂ ಕ್ರಮ ತೆಗೆದುಕೊಳ್ಳುತ್ತೀರೋ? ಇಲ್ಲದಿದ್ದರೆ ತುರ್ತಾಗಿ ಆ ಕೆರೆಯನ್ನು ಒಣಗಿಸುವ ಕ್ರಮವೇನಾದರು ತೆಗೆದುಕೊಳ್ಳುತ್ತೀರೋ ಹೇಗೆ ಎಂಬುದನ್ನು ತಿಳಿಸಬೇಕು.

ಶ್ರೀ ತಿಪ್ಪೇಸ್ವಾಮಿ: ಮಾನ್ಯ ಅಧ್ಯಕ್ಷರೆ, ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಈ ಕೆರೆಯ ವ್ಯವಸ್ಥೆ ಬಹಳ ಕೆಟ್ಟದ್ದಾಗಿದೆಯೆಂದು ನಮ್ಮ ಗಮನಕ್ಕೆ ಬಂದಿದೆ. ಇದರ ಅಚ್ಚುಕಟ್ಟು 33 ಎಕರೆ. ನೂರು ಎಕರೆ ಒಳಗಿರತಕ್ಕ ಅಚ್ಚುಕಟ್ಟು ಜಿಲ್ಲಾಪಂಚಾಯಿತಿಯ ಕಾರ್ಯವ್ಯಾಪ್ತಿಗೆ ಬರುತ್ತದೆ. ಜಿಲ್ಲಾಪಂಚಾಯತ್ ಸಚಿವರಲ್ಲಿ ಮತ್ತು ಹಾಸನ ಜಿಲ್ಲಾಪರಿಷತ್‌ಗೆ ಇದರ ಬಗ್ಗೆ ಬರೆದು ಈ ಕೆರೆಯನ್ನು ತೆರವು ಮಾಡಬೇಕೆಂದು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದಷ್ಟು ಜಾಗ್ರತೆ ಜಿಲ್ಲಾಪಂಚಾಯಿತಿ, ಹಾಸನ ಇವರಿಗೆ ಹೇಳಿ ಅದನ್ನು ಮಾಡಿಸಿಕೊಡುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ: ಅರಕಲಗೂಡು ಪಟ್ಟಣ ಪಂಚಾಯಿತಿಯಾಗಿದೆ. ಆದ್ದರಿಂದ ಅದು ಜಿಲ್ಲಾಪಂಚಾಯಿತಿಯ ವ್ಯಾಪ್ತಿಗೆ ಬರುವುದಿಲ್ಲವೆಂದು ನನ್ನ ಅಭಿಪ್ರಾಯ. ಅದನ್ನು ತಾವೂ ಒಪ್ಪಿಕೊಳ್ಳುತ್ತೀರೆಂದು ತಿಳಿದುಕೊಳ್ಳುತ್ತೇನೆ. ತಾವೇ ಇದರ ಬಗ್ಗೆ ನೇರವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆರೋಗ್ಯದ ಮತ್ತು ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಆ ಕೆರೆಯನ್ನು ತೆರವು ಮಾಡಲೇ ಬೇಕಾಗುತ್ತದೆ. ಕಳೆದ ವರ್ಷ ಅಲ್ಲಿ ಮಲೇರಿಯಾ ಹರಡಿ ಮೂರುನಾಲ್ಕು ಜನರು ಮೃತರಾಗಿರುತ್ತಾರೆ. ತಾವೇ ಅದನ್ನು ತೆರವು ಮಾಡಿಸಲು ಕ್ರಮತೆಗೆದುಕೊಳ್ಳಬೇಕು.

ಶ್ರೀ ತಿಪ್ಪೇಸ್ವಾಮಿ: ಎಲ್ಲೇ ಕೆರೆಗಳು ಇರಲಿ ಅದು ನೂರು ಎಕರೆ ಒಳಗಿದ್ದರೆ ಅದು ಜಿಲ್ಲಾಪಂಚಾಯಿತಿಗೆ ಬರುತ್ತದೆ. ಬೆಂಗಳೂರು ನಗರದಲ್ಲಿ ಕೆಲವುಕೆರೆಗಳಿದೆ. ಅದು ನೂರು ಎಕರೆ ಅಚ್ಚುಕಟ್ಟನ್ನು ಹೊಂದಿದ್ದರೆ ಅದು ನನ್ನ ಖಾತೆಗೆ ಬರುತ್ತದೆ. ಇದು ನಗರದ ಮಧ್ಯವಿರುವುದರಿಂದ ಅದು ಪರಸಭೆಯ ವ್ಯಾಪ್ತಿಗೆ ಬರುತ್ತದೋ ಅಥವಾ ಜಿಲ್ಲಾಪಂಚಾಯಿತಿಗೆ ಬರುತ್ತದೋ ಎಂಬುದನ್ನು ನೋಡಬೇಕಾಗಿದೆ. ಸದಸ್ಯರು ಹೇಳಿರುವ ವಿಚಾರವಂತೂ ಸಮಂಜಸವಾಗಿದೆ. ಇದು ಯಾರ ವ್ಯಾಪ್ತಿಗೆ ಬರುತ್ತದೋ ಅದನ್ನು ತಿಳಿದು ಸರ್ಕಾರದ ಗಮನಕ್ಕೆ ಇದನ್ನು ತಂದು ಕೆಲಸ ಮಾಡಿಸಲು ಪ್ರಯತ್ನ ಪಡುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ: ಇದು ಮೂರು ವರ್ಷದಿಂದ ಪ್ರಯತ್ನ ಮಾಡಿ ಮಂಜೂರಾತಿ ಯಾಗಿದೆ. ಕಳೆದ ಸಲ ಸಹ ಪ್ರಶ್ನೆಯನ್ನು ಹಾಕಿದ್ದೆ. ಸಾರ್ವಜನಿಕರಿಗೆ ಬಹಳ ಕೆಟ್ಟ ಪರಿಣಾಮ ಬೀರುತ್ತದೆ. ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ಎಂಬ ಬಗ್ಗೆ ಹೇಳಿ? ಒಬ್ಬರ ಮೇಲೆ ಒಬ್ಬರು ಜವಾಬ್ದಾರಿಯನ್ನು ವರ್ಗಾವಣೆ ಮಾಡಿಕೊಂಡು ಹೋಗುವುದು ಬೇಡ, ಜನರಿಗೆ ಕೆಲಸವಾಗಬೇಕು.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಎರಡು ಬಾರಿ ಈ ಕ್ಷೇತ್ರದಲ್ಲಿ ಪ್ರತಿನಿಧಿಸಿದ್ದೆ. ಅಲ್ಲಿ ಸದಾ ಕಾಲ ಜಗಳವಾಗಲು ಈ ಕೋಟೆ ಕೆರೆ ಅವಕಾಶ ಮಾಡಿಕೊಟ್ಟಿದೆ. ಇಲ್ಲಿಗೆ ಚರಂಡಿಗಳ ನೀರು ಬರುತ್ತದೆ. ಇದನ್ನು ತೆರವು ಮಾಡಬೇಕೆಂದು ಸಣ್ಣನೀರಾವರಿ ಇಲಾಖೆಯವರು ಮತ್ತು ಆರೋಗ್ಯ ಇಲಾಖೆಯವರಿಬ್ಬರು ಸೇರಿ ಸರ್ವೆ ಮಾಡಿದ್ದರು. ಆನಂತರ ಆದೇಶ ಮಾಡಿದ್ದರು. ಮೇಲೆ ಹತ್ತು ಎಕರೆಗೆ ರಿಂಗ್ ಬಂಡ್‌ನ್ನು ಹಾಕಿ ಸೀಮಿತವಾಗಿಯಾದರೂ ಮಾಡಬೇಕಾಗಿತ್ತು. ಅದಕ್ಕೆ ವಿಶೇಷವಾದ ಗ್ರಾಂಟ್ಸ್‌ನ್ನು ಒದಗಿಸುವ ಬಗ್ಗೆಯಾದರೂ ಹೇಳಿ. ತಾವು ನಿಯಮ ಮತ್ತೊಂದು ನೋಡಿಕೊಂಡು ಮಾಡುತ್ತೇನೆಂದರೆ ಆಗುವುದಿಲ್ಲ. ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಗಂಡಸಿ ಕ್ಷೇತ್ರಕ್ಕೆ ನಾಲ್ಕು ಕೋಟಿ ವಿಶೇಷ ಗ್ರಾಂಟ್‌ನ್ನು ಕೊಟ್ಟರು. ಯಾವ ನಿಯಮದ ಪ್ರಕಾರ ಕೊಟ್ಟರು? ಸರ್ಕಾರ ಮನಸ್ಸು ಮಾಡಿದರೆ ಇದೆಲ್ಲಾ ದೊಡ್ಡದೇನಲ್ಲ. ಇದಕ್ಕೆ 10-12 ಲಕ್ಷ ರೂ.ಗಳು ಖರ್ಚಾಗಬಹುದು. ಒಂದು ಪಟ್ಟಣದ ನೈರ್ಮಲ್ಯ ಮತ್ತು ಜನರ ಆರೋಗ್ಯದ ವಿಚಾರದ ಇದರಲ್ಲಿದೆ. ದಯವಿಟ್ಟು ಇದಕ್ಕೆ ಹಣವನ್ನು ಒದಗಿಸಿ ಕೆಲಸ ಪ್ರಾರಂಭ ಮಾಡಿ.

ಶ್ರೀ ತಿಪ್ಪೇಸ್ವಾಮಿ: ಆದಷ್ಟು ಬೇಗ ಕೆಲಸ ಮಾಡುವ ವ್ಯವಸ್ಥೆ ಮಾಡುತ್ತೇನೆ. ಇದು ನನ್ನ ಖಾತೆಗೆ ಬಂದಿದ್ದರೆ ಭರವಸೆಯನ್ನು ಕೊಟ್ಟುಬಿಡುತ್ತಿದ್ದೆ. ನೂರು ಎಕರೆ ಒಳಪಟ್ಟು ಜಿಲ್ಲಾ ಪಂಚಾಯಿತಿಗೆ ಬರುತ್ತದೆ.

ಶ್ರೀ ಹೆಚ್.ಎನ್.ನಂಜೇಗೌಡ: ಇದು ವಿಶೇಷವಾದ ಪ್ರಸಂಗ. ಜಿಲ್ಲಾ ಪಂಚಾಯಿತಿಯವರು ಮಾಡದಿದ್ದರೆ ನೀವಾದರೂ ಗ್ರಾಂಟ್‌ನ್ನು ಕೊಡಬೇಕಾಗುತ್ತದೆ. ಆ ಕೆರೆಯನ್ನು ನೈರ್ಮಲ್ಯದ ದೃಷ್ಟಿಯಿಂದ ಒಣಗಿಸಬೇಕೆಂಬ ಸರ್ಕಾರ ಆದೇಶ ಮಾಡಿತ್ತು. ಜಿಲ್ಲಾಪರಿಷತನ್ನು ನಂಬಿಕೊಂಡರೆ ಆಗುವುದಿಲ್ಲ. ನೀವೇ ಗ್ರಾಂಟ್ಸ್‌ನ್ನು ಒದಗಿಸಬೇಕು.

ಶ್ರೀ ತಿಪ್ಪೇಸ್ವಾಮಿ: ವಿಚಾರ ಮಾಡಿ ಆದಷ್ಟು ಬೇಗ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ: ಜಿಲ್ಲಾಪಂಚಾಯಿತಿಗೆ ಗ್ರಾಂಟ್ಸ್‌ನ್ನು ಒದಗಿಸುವವರು ಸರ್ಕಾರದವರು. ಇಲ್ಲಿಂದ ನೇರವಾಗಿ ಆ ಕೆರೆಗೆ ವಿಶೇಷವಾದ ಅನುದಾನವನ್ನು ಕೊಡಿ. ಜಿಲ್ಲಾಪಂಚಾಯಿತಿ ತಮ್ಮ ಸರ್ಕಾರವನ್ನು ಬಿಟ್ಟು ಹೊರಗೇನಿಲ್ಲವಲ್ಲಾ? ದಯಮಾಡಿ ಆದೇಶಕೊಟ್ಟು ಈ ವರ್ಷದ ಬೇಸಿಗೆಯಲ್ಲಿ ಆ ಕೆರೆಯನ್ನು ಒಣಗಿಸುವ ಪ್ರಯತ್ನ

ಮಾಡಬೇಕು.

ಶ್ರೀ ತಿಪ್ಪೇಸ್ವಾಮಿ: ಆದಷ್ಟು ಪ್ರಯತ್ನ ಮಾಡುತ್ತೇನೆ.

ವಿಷಯ: ಶಾಂತಿನಗರ ವಿಧಾನ ಸಭಾ ಕ್ಷೇತ್ರದಲ್ಲಿನ ಪೊಲೀಸ್ ವಸತಿ ಗೃಹಗಳ ದುರಸ್ಥಿ.

532 (3371)

ಡಿ.ಜಿ.ಹೇಮಾವತಿ (ಶಾಂತಿನಗರ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಂತಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ವಸತಿ ಗೃಹಗಳ ಸಂಖ್ಯೆ ಎಷ್ಟು?

ಆ) ವಸತಿ ಗೃಹಗಳ ದುರಸ್ತಿ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಯಾವಾಗ ದುರಸ್ತಿ ಕಾರ್ಯ ಮಾಡಲಾಗುವುದು?

ಇ) ವಸತಿಗೃಹಗಳ ದುರಸ್ತಿಗಾಗಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆಯೇ?

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) 646.

ಆ) ಕೆಲವು ವಸತಿ ಗೃಹಗಳು ತುರ್ತಾಗಿ ದುರಸ್ತಿ ಆಗಬೇಕಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಈ ಸಂಬಂಧದಲ್ಲಿ ಕಾರ್ಯಪಾಲಕ ಅಭಿಯಂತರರು, ನಂ.2, ಕಟ್ಟಡಗಳ ವಿಭಾಗ, ಲೋಕೋಪಯೋಗಿ ಇಲಾಖೆ, ಬೆಂಗಳೂರುರವರು 16.72 ಲಕ್ಷ ರೂಪಾಯಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿರುತ್ತಾರೆ. ವಸತಿ ಗೃಹಗಳ ದುರಸ್ತಿಯ ಕಾರ್ಯವನ್ನು ಆದ್ಯತೆಯ ಮೇರೆಗೆ ಹಣಕಾಸಿನ ಸೌಲಭ್ಯವನ್ನು ನೋಡಿಕೊಂಡು ತ್ವರಿತವಾಗಿ ಕೈಗೆತ್ತಿಕೊಳ್ಳಲಾಗುವುದು.

ಇ) ಹೌದು.

ಶ್ರೀಮತಿ ಡಿ.ಜಿ.ಹೇಮಾವತಿ: ಮಾನ್ಯ ಅಧ್ಯಕ್ಷರೆ, ಪೊಲೀಸ್ ವಸತಿ ಗೃಹಗಳಿಗೆ 16.72 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ದುರಸ್ತಿ ಮಾಡುವ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಅವರಿಗೆ ಸರಿಯಾಗಿ ರಸ್ತೆಗಳಿಲ್ಲ, ಕುಡಿಯುವ ನೀರಿಲ್ಲ; ಆದ್ದರಿಂದ ತಾವು ಇನ್ನೂ ಐವತ್ತು ಲಕ್ಷ ಹೆಚ್ಚು ಹಣವನ್ನು ಕೊಟ್ಟು ಆ ವಸತಿಗೃಹಗಳನ್ನು ದುರಸ್ತಿ ಮಾಡಿಕೊಡಬೇಕು. ಮೂರು ತಿಂಗಳ ಹಿಂದೆ ಪೊಲೀಸ್‌ನವರಿಗೆ ಉಳಿತವಾಗಿ ಪಡಿತರ ಪದಾರ್ಥಗಳನ್ನು